














# ವಜ್ರದ ಹೊಳಪು, ಹೊಸ ಒನಪು

ಹೊಸ ವರ್ಷದ ಆರಂಭದೊಂದಿಗೆ ಕನ್ನಡಿಗರ ಹೆಮ್ಮೆಯ ವಾರಪತ್ರಿಕೆ 'ಸುಧಾ' 59 ವಸಂತಗಳನ್ನು ದಾಟಿ, 60ನೇ ವರ್ಷಕ್ಕೆ ಕಾಲಿಟ್ಟಿದೆ. ಅರವತ್ತು ವರ್ಷಗಳ ಪಯಣ ಯಾವುದೇ ಪತ್ರಿಕೆಯ ಪಾಲಿಗೆ ಸಂಭ್ರಮದ ಸಂದರ್ಭ. ಓದುಗರ ವಿಶ್ವಾಸವನ್ನು ಉಳಿಸಿಕೊಂಡು ಆರು ದಶಕಗಳ ಕಾಲ ಮುನ್ನಡೆದು ಬರುವುದು ಸಾಧಾರಣ ವಿಷಯವಲ್ಲ. ಕನ್ನಡನಾಡಿನ ಮನೆಮಂದಿಯೆಲ್ಲ ಓದಿ ಆನಂದಿಸುವ ಉತ್ತಮ ವಾರಪತ್ರಿಕೆಯೊಂದನ್ನು ರೂಪಿಸುವ ಉದ್ದೇಶದಿಂದ 1965ರ ಜನವರಿ 11ರಂದು ಆರಂಭಗೊಂಡ ದಿನದಿಂದ ಇಲ್ಲಿಯವರೆಗೂ 'ದಿ ಪ್ರಿಂಟರ್ಸ್ (ಮೈಸೂರು) ಪ್ರೈ. ಲಿಮಿಟೆಡ್' ಸಂಸ್ಥೆಯ 'ಸುಧಾ' ಕನ್ನಡಿಗರ ಮೆಚ್ಚಿನ ನಿಯತಕಾಲಿಕವಾಗಿ ಉಳಿದುಬಂದಿದೆ. 'ಸುಧಾ' ಎನ್ನುವುದೀಗ ಸಹೃದಯರ ಪಾಲಿಗೆ ಬರಿಯ ನಿಯತಕಾಲಿಕವಾಗಿ ಉಳಿದಿಲ್ಲ. ಅದು ಸಹೃದಯರ ಹೃದಯಸಂವಾದದ ಭಾಗವಾಗಿದೆ. ಸಾವಿರಾರು ಕುಟುಂಬಗಳ ಪಾಲಿಗೆ ಕರುಳಸಂಬಂಧದಂತಿದೆ. ಮೊದಲ ಸಂಚಿಕೆಯಿಂದ ಇಲ್ಲಿಯವರೆಗೆ ಪತ್ರಿಕೆಯನ್ನು ನಿರಂತರವಾಗಿ ಓದಿಕೊಂಡು ಬಂದವರಿದ್ದಾರೆ. ಹಿರಿಯರು ನೀಡಿದ ಬಳುವಳಿಯ ರೂಪದಲ್ಲಿ ನಾಲ್ಕೈದು ದಶಕಗಳಿಂದ 'ಸುಧಾ' ಜೊತೆ ನಂಟು ಉಳಿಸಿಕೊಂಡವರಿದ್ದಾರೆ.

ಓದುವ ರುಚಿಯನ್ನು ಬೆಳೆಸುವುದರ ಜೊತೆಗೆ ಅಭಿರುಚಿಯನ್ನು ರೂಪಿಸುವ ಕೆಲಸವನ್ನೂ ಪತ್ರಿಕೆ ನಿರಂತರವಾಗಿ ಮಾಡಿಕೊಂಡು ಬಂದಿದೆ. ಎಳೆಯರು, ಮಹಿಳೆಯರಿಂದ ಹಿಡಿದು ಎಲ್ಲ ವಯೋಮಾನದವರ ಬದುಕಿಗೆ ಅಗತ್ಯವಾದ ಸಂಗತಿಗಳನ್ನು ಒಳಗೊಳ್ಳುವ ಮೂಲಕ ಕೌಟುಂಬಿಕ ಪತ್ರಿಕೆಯ ಸ್ವರೂಪ ಪಡೆದುಕೊಂಡಿದೆ. ಕನ್ನಡ ಸಾಂಸ್ಕೃತಿಕ ಲೋಕಕ್ಕೆ 'ಸುಧಾ' ನೀಡಿರುವ ಕೊಡುಗೆ ಅನುಪಮವಾದುದು. ಸಾಹಿತ್ಯ–ಸಿನಿಮಾ ಕ್ಷೇತ್ರಗಳ ಬೆಳವಣಿಗೆಗಂತೂ ಅಂತರ್ಜಲದ ರೂಪದಲ್ಲಿ ಪರಿಣಮಿಸಿದೆ. ಬರವಣಿಗೆಯ ತಾಲೀಮು ಮಾಡುವ ಹೊಸಬರಿಂದ ಹಿಡಿದು ಹಿರಿಯ ಲೇಖಕರವರೆಗೆ ಎಲ್ಲರಿಗೂ 'ಸುಧಾ' ಅಭಿವ್ಯಕ್ತಿಯ ವೇದಿಕೆಯಾಗಿದೆ. 'ಸುಧಾ'ದಲ್ಲಿ ಧಾರಾವಾಹಿಗಳಾಗಿ ಪ್ರಕಟಗೊಂಡ ಅನೇಕ ಕಾದಂಬರಿಗಳು ಸಿನಿಮಾಗಳಾಗಿ ರೂಪಾಂತರಗೊಂಡು ಸಹೃದಯರ ಮೆಚ್ಚುಗೆ ಗಳಿಸಿವೆ.

ಕಾಲಕ್ಕೆ ತಕ್ಕಹಾಗೆ ಪತ್ರಿಕೆಯ ಸ್ವರೂಪ ಬದಲಾಗಿದೆ. ಲೇಖನಗಳ ಗುಣಮಟ್ಟದೊಂದಿಗೆ ಅಚ್ಚುಕಟ್ಟು ವಿನ್ಯಾಸವನ್ನು ಒಳಗೊಂಡಿದೆ. ಕೊರೊನಾ ತೀವ್ರತೆಯ ಸಂದರ್ಭದಲ್ಲೂ 'ಸುಧಾ' ತನ್ನ ಪ್ರಕಟಣೆ ನಿಲ್ಲಿಸಿಲ್ಲ, ಗುಣಮಟ್ಟದಲ್ಲಿ ಸೊರಗಿಲ್ಲ. ಕರ್ನಾಟಕ ಮಾತ್ರವಲ್ಲ, ದೇಶದ ವಿವಿಧ ಭಾಗಗಳಲ್ಲೂ 'ಸುಧಾ' ಪತ್ರಿಕೆಯನ್ನು ಪ್ರತಿ ವಾರ ಮನೆಗೆ ಬರಮಾಡಿಕೊಳ್ಳುವ ಓದುಗಬಂಧುಗಳಿದ್ದಾರೆ. www.sudhaezine.com ಮೂಲಕ ವಿದೇಶಗಳಲ್ಲಿನ ಕನ್ನಡಿಗರನ್ನೂ ತಲುಪುತ್ತಿದೆ. ನಿಮ್ಮ ಈ ಹೆಮ್ಮೆಯ 'ಸುಧಾ' ಕನ್ನಡದ ಅತ್ಯುತ್ತಮ ವಾರಪತ್ರಿಕೆ ಮಾತ್ರವಲ್ಲ, ದೇಸಿ ಭಾಷೆಗಳಲ್ಲಿನ ಯಾವುದೇ ಸಾಪ್ತಾಹಿಕಕ್ಕೆ ಗುಣಮಟ್ಟದಲ್ಲಿ ಹೆಗಲೆಣೆಯಾಗಿ ನಿಲ್ಲುವಂತಹದ್ದು.

ಅರವತ್ತು ವರ್ಷಗಳ ಈ ಅನುಬಂಧ, ಓದುಗರ ನಿಷ್ಕಲ್ಮಶ ಪ್ರೀತಿ ಹೀಗೆಯೇ ಮುಂದುವರೆಯಲಿ; ನಾವು ತೂಕಡಿಸಿದಾಗ ಎಚ್ಚರಿಸುವ, ಸರಿದಾರಿಯಲ್ಲಿ ನಡೆದಾಗ ಬೆನ್ನು ತಟ್ಟುವ ಕೆಲಸವನ್ನು ಎಂದಿನಂತೆ ಮುಂದುವರೆಸಿ ಎಂದು ನಿಮ್ಮಲ್ಲಿ 'ಸುಧಾ' ಬಳಗದ ಕೋರಿಕೆ. ಅರವತ್ತರ ಈ ಸಂದರ್ಭ 'ಸುಧಾ' ಪಾಲಿಗೆ ಮರಳಿ ಅರಳುವ ಸಮಯ. ಅರವತ್ತರ ಸಂಭ್ರಮ ವರ್ಷಪೂರ್ತಿ ಮುಂದುವರೆಯಲಿದೆ. ಓದುಗರ ನಿರೀಕ್ಷೆಗಳಿಗೆ ತಕ್ಕಂತೆ ತನ್ನನ್ನು ನಿರಂತರವಾಗಿ ಹೊಸತಾಗಿಸಿಕೊಳ್ಳಲು 'ಸುಧಾ' ಸದಾ ಉತ್ಸುಕ ಹಾಗೂ ಬದ್ಧ.

ಸಮಸ್ತ ಓದುಗ ಬಳಗಕ್ಕೆ ಹೊಸ ವರ್ಷದ ಶುಭಾಶಯಗಳು.

—ಕೆ.ಎನ್. ತಿಲಕ್ ಕುಮಾರ್
ಸಂಪಾದಕ
editorsu@sudha.co.in







